


# ಅಧರಂ.. ಮಧುರಂ...

ತುಟಿಗಳು ಕೆಂಪಗಿರಬೇಕು, ಅಂದವಾಗಿರಬೇಕು, ಇದರಿಂದ ಸುಂದರವಾಗಿ ಕಾಣಬೇಕು ಎಂಬುದು ಹೆಣ್ಣುಮಕ್ಕಳ ಬಯಕೆ. ಮುಖದಲ್ಲಿ ಎದ್ದುಕಾಣುವ ಅಂಗಗಳಲ್ಲಿ ತುಟಿಯೂ ಒಂದು. ತುಟಿ ಅಂದಗೆಟ್ಟರೆ ಮುಖಕ್ಕೇ ಕಪ್ಪುಚುಕ್ಕೆ ಇಟ್ಟಹಾಗೆ. ಹಾಗಾದರೆ ತುಟಿಗಳ ಸೌಂದರ್ಯ ಕಾಪಾಡುವುದು ಹೇಗೆ?

■ ಶಿವಲೀಲಾ ಬಿ.ಎಸ್.

ಅಧರಂ ಮಧುರಂ ನಯನಂ ಮಧುರಂ... 'ಮಧುರಾಷ್ಟಕ'ದಲ್ಲಿರುವ ಈ ಭಜನೆಯನ್ನು ಶ್ರೀವಲ್ಲಭಾಚಾರ್ಯರು ಕೃಷ್ಣನ ಮೇಲೆ ಬರೆದಿದ್ದು, ಆರಂಭದಲ್ಲೇ ತುಟಿಗಳ ಮಹತ್ವವನ್ನು ಸಾರುತ್ತಿದೆ. ಮುಖದ ಅಂದ ಹೆಚ್ಚಿಸಲು ಕೆಂಪನೆಯ ತುಟಿಗಳು ಸಹಕಾರಿ. ಸಾಮಾನ್ಯವಾಗಿ ತುಟಿಗಳನ್ನು ತೊಂಡೆ ಹಣ್ಣಿಗೆ ಹೋಲಿಸುವುದು ಇದೆ. ತುಟಿಗಳ ಸೌಂದರ್ಯ ಹೆಚ್ಚಿಸಲು ರಂಗು ಹಚ್ಚಿಕೊಳ್ಳುವುದು ಸಹಜ.

ಹೆಣ್ಣು ಮಕ್ಕಳ ಮುಖಾರವಿಂದದಲ್ಲಿ ಹಾಗೂ ನಗುವಿನಲ್ಲಿ ಪ್ರಮುಖವಾಗಿ ಎದ್ದು ಕಾಣುವುದೆಂದರೆ ಆಕೆಯ ಸುಂದರ ಹಾಗೂ ಮೃದುತ್ವ ಹೊಂದಿದ ತುಟಿಗಳೇ. ಸಹಜವಾದ ತುಟಿಗಳೇ ಇರಲಿ, ಲಿಪ್‌ಸ್ಟಿಕ್ ಬಳಸಿರಲಿ, ಅವುಗಳ ಮಾದಕತೆಯು ಆಕರ್ಷಣೀಯವಾಗಿರುತ್ತದೆ. ಆದರೆ ಇತ್ತೀಚೆಗೆ ಬದಲಾಗುತ್ತಿರುವ ಋತುಮಾನಕ್ಕೆ ಅನುಗುಣವಾಗಿ ನಮ್ಮ ಚರ್ಮದಂತೆ ತುಟಿಗಳು ಕೂಡ ಒಣಗಿ ಬಿಡುತ್ತವೆ. ಕೆಲವೊಮ್ಮೆ ಅವುಗಳಲ್ಲಿ ಜೀವಂತಿಕೆಯೇ ಕಂಡುಬರುವುದಿಲ್ಲ. ನಾವು ಮನೆಯಲ್ಲಿಯೇ ಇರಲಿ ಅಥವಾ ಹೊರಗಡೆ ಯಾವುದಾದರೂ ಸಮಾರಂಭದಲ್ಲಿರಲಿ, ನಮ್ಮ ಗಮನವೆಲ್ಲ ಒಡೆದ ತುಟಿಗಳ ಕಡೆಗೆ ಇರುತ್ತದೆ. ಇದರಿಂದಾಗಿ ದೇಹದ ಇತರ ಸೌಂದರ್ಯದ ಕಡೆಗೆ ನಿರ್ಲಕ್ಷ್ಯ ಭಾವನೆ ಉಂಟಾಗತೊಡಗುತ್ತದೆ. ಮನೆಯಲ್ಲಿದ್ದಾಗಲಂತೂ ಮನಸ್ಸು ಏನನ್ನೋ ಪ್ರಯೋಗ ಮಾಡಲು ಸಿದ್ಧವಾಗುತ್ತದೆ. ಆಗ ಅದು ದೊಡ್ಡ ಚಿಂತೆಯಾಗಿ ಮಾರ್ಪಡುತ್ತದೆ.

## ತುಟಿಗಳು ಒಣಗುವುದೇಕೆ?

ಮುಖಕ್ಕಿಂತಲೂ ಬೇಗನೆ ತುಟಿಗಳು ಏಕೆ ಒಣಗುತ್ತವೆ. ದೇಹದ ಬೇರೆ ಭಾಗಗಳಿಗೆ

